

ಕೃತಿ ಸಮಸ್ತವೂ ದ್ವೇಷಪೂರ, ವಿಷಮಯ, ನೀರಸ, ಅಧಮ ಎಂಬಂತೆ ತೋರಿ ಕಲೆಯ ಉದ್ದೇಶವೇ ಕೊಲೆ ಹೋಗುತ್ತದೆ. ಕನ್ನಡಕ್ಕೆ ಅಂತಹ ದುರ್ಗತಿ ಒದಗದಿರಲಿ'.

ಸಾರಸ್ವತ ಲೋಕದ ಎರಡು ದಿಗ್ಗಜರ ನಡುವಿನ ವಾಕ್ಸಮರದ ಪರಿ ಅದು. ಅದೊಂದು ಉನ್ನತ ಬೌದ್ಧಿಕ ಸಂವಾದ. ಈ ಘಟನೆ ಆ ಎರಡು ಹಿರಿಯ ಚೇತನಗಳ ನಡುವಿನ ಪರಸ್ಪರ ಸ್ನೇಹಕ್ಕೆ ಎಂದೂ ಅಡ್ಡಿಯಾಗಲಿಲ್ಲ. ಅವರಿಬ್ಬರ ಮಧ್ಯದ ಗೌರವಾದರಗಳಿಗೆ ಚ್ಯುತಿ ತರಲಿಲ್ಲ.

ಹಾಗೆ ನೋಡಿದರೆ ಮಾಸ್ತಿಯವರು ಕುವೆಂಪುರವರಿಗಿಂತ ವಯಸ್ಸಿನಲ್ಲಿ ಹದಿಮೂರು ವರ್ಷ ಹಿರಿಯರು. ಹೆಚ್ಚುಕಡಿಮೆ ಸಮಕಾಲೀನರೇ. ಕೆಲವೊಂದು ವಿಚಾರಗಳಲ್ಲಿ ಅವರಿಬ್ಬರ ನಿಲುವುಗಳು ಬೇರೆಯಾಗಿದ್ದರೂ ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ವಿಷಯದಲ್ಲಿ ಅವರಿಬ್ಬರ ಒಲವು ಒಂದೇ ಆಗಿತ್ತು. ಆ ವಿಷಯದಲ್ಲಿ ಅವರು ಸಮಾನ ಮನಸ್ಕರಷ್ಟೇ ಅಲ್ಲ, ಪರಸ್ಪರ ಪೂರಕರೂ, ಪ್ರೇರಕರೂ, ಕಾರಕರೂ ಆಗಿದ್ದರು. ಒಬ್ಬರು ಇನ್ನೊಬ್ಬರಲ್ಲಿರುವ ಪ್ರತಿಭೆ, ಪ್ರಜ್ಞೆ, ವಿದ್ವತ್ತನ್ನೂ ಗುರುತಿಸಿ ಮೆಚ್ಚಿ ಮನಸಾರೆ ಮಾತನಾಡುವ 'ದೊಡ್ಡತನ' ಅವರಿಬ್ಬರಲ್ಲಿಯೂ ಇತ್ತು.

ಕುವೆಂಪುರವರು ತಮ್ಮ ಸಣ್ಣಕಥೆಗಳಿಗೆ ಮುನ್ನುಡಿ ಬರೆದುಕೊಡಬೇಕೆಂದು ಮಾಸ್ತಿಯವರನ್ನು ಕೋರುತ್ತಾರೆ. ಅದಕ್ಕೆ ಮಾಸ್ತಿಯವರು ಒಪ್ಪುತ್ತಾರೆ. ಆಗ ಕುವೆಂಪುರವರು ಮಾಸ್ತಿಯವರಿಗೆ ಪತ್ರವೊಂದನ್ನು ಬರೆದು ಹೀಗೆ ಹೇಳುತ್ತಾರೆ: 'ತಾವು ಆದರದಿಂದ ಬರೆದ ಕಾಗದವು ಕೈಸೇರಿ ಆನಂದವಾಯಿತು. ನನ್ನ ಸಣ್ಣ ಕಥೆಗಳಿಗೆ ಮುನ್ನುಡಿ ಬರೆದುಕೊಡಲು ಒಪ್ಪಿದುದಕ್ಕಾಗಿ ತಮಗೆ ನಾನು ಚಿರಋಣಿ ಮತ್ತು ಚಿರಕೃತಜ್ಞ. ನನ್ನ ಹುಬ್ಬಳ್ಳಿಯ ಭಾಷಣದಿಂದ ತಮಗೆ ಆನಂದವಾಗಿದ್ದರೆ ನನಗೊಂದು ಬೆಲೆಯುಳ್ಳ ಬಹುಮಾನ ಲಭಿಸಿತೆಂದೇ ಭಾವಿಸುತ್ತೇನೆ. ಶ್ರೀಮಾನ್ ಡಿ.ವಿ. ಗುಂಡಪ್ಪನವರೂ ಮತ್ತು ಇತರ ಪೂಜ್ಯ ಮಿತ್ರರೂ ನಿಮ್ಮಂತೆಯೇ ನನ್ನ ಬೆನ್ನು ತಟ್ಟಿದರು. ಉತ್ತೇಜನ ಕೊಟ್ಟರು. ಆ ಭಾಷಣದಲ್ಲಿ ತಮಗೆ ಒಪ್ಪಿಗೆಯಾಗದ ವಿಷಯವೇನೋ ನನಗೆ ಊಹೆಯಾಗಿಲ್ಲ. ನನ್ನಂತಹ ತರುಣಮತಿಯು ತಮ್ಮಂತಹ ಪರಿಣತಮತಿಗೆ ಅಪೂರ್ಣವಾಗಿ ಕಂಡುಬರುವುದರಲ್ಲಿ ಏನೂ